



ಒಳಗೆ ಪ್ರವೇಶಿಸಿದಾಗ ಮೊದಲಿಗೆ ಸಿಗುವುದು ನವರಂಗ, ನಂತರ ಸುಖನಾಸಿ ಮತ್ತು ಅಲ್ಲಿಂದ ಒಳಗೆ ಗರ್ಭಗುಡಿ. ಪ್ರತಿಯೊಂದು ಗರ್ಭಗುಡಿಯ ಮುಂದೆಯೂ ಒಂದೊಂದು ಪ್ರತ್ಯೇಕ ಅಂತರಾಳ ಇದೆ. ಶಿವನ ಮೂಲ ರೂಪವಾದ ಸದ್ಯೋಜಾತೇಶ್ವರ, ವಾಮದೇವೇಶ್ವರ, ಅಘೋರೇಶ್ವರ, ತತ್ಪುರುಷೇಶ್ವರ, ಈಶಾನ್ಯೇಶ್ವರ ಎಲ್ಲವೂ ಒಂದೇ ಕಡೆ ಇರುವುದು ಈ ದೇವಾಲಯದ ವಿಶೇಷ. ಮೇಲ್ನೋಟಕ್ಕೆ ಐದೂ ಶಿವಲಿಂಗಗಳು ಒಂದೇ ರೀತಿ ಕಂಡು ಬಂದರೂ, ಲಕ್ಷಣದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಪ್ರತೀ ಲಿಂಗದ ಎದುರಿಗೆ ನಂದಿ, ಬಲಭಾಗದಲ್ಲಿ ಗಣೇಶ, ಎಡಭಾಗದಲ್ಲಿ ಚಾಮುಂಡೇಶ್ವರಿ ಹಾಗೂ ದ್ವಾರಪಾಲಕರಾದ ನಂದಿ ಮತ್ತು ಭೃಂಗಿಯನ್ನು ಕಾಣಬಹುದು. ಇವರೆಲ್ಲರೂ ಶಿವನ ಪರಿವಾರ.

ಒಳಾಂಗಣದಲ್ಲಿ ಒಟ್ಟು 68 ಕಂಬಗಳಿದ್ದು, ಉದ್ದನೆಯ ಛಾವಣಿಯ ಒಂದೊಂದು ಭಾಗದಲ್ಲೂ ವಿವಿಧ ಶಿಲ್ಪವಿನ್ಯಾಸವಿದೆ. ಎರಡೂ ಬದಿಗಳಲ್ಲಿ ಕ್ಷೇತ್ರ ಪಾಲಕರಾದ ವೀರಭದ್ರೇಶ್ವರ ಮತ್ತು ಸುಬ್ರಹ್ಮಣ್ಯ ವಿಗ್ರಹಗಳಿವೆ. ಐದೂ ಗರ್ಭಗುಡಿಯ ಬಾಗಿಲ ಮೇಲೆ ನಟರಾಜ ಮತ್ತು ಹೊಯ್ಸಳ ವಾಸ್ತುಶಿಲ್ಪದ ಪ್ರಮಾಣಿತ ಚಿಹ್ನೆ ಹಂಸಶಾರ್ದೂಲ ವಿನ್ಯಾಸ ನೋಡಬಹುದು. ಹಂಸಶಾರ್ದೂಲದಲ್ಲಿ ಮಕರ (ಮೊಸಳೆ) ಬಾಯಿ, ಸಿಂಹದ ಮುಖಕತ್ತು, ನವಿಲಿನ ಕಣ್ಣು ಬಾಲ, ಹಂಸದ ಶರೀರವನ್ನು ಕಾಣಬಹುದು. ಸಿಂಹ ಮತ್ತು ಹಂಸವನ್ನು ಪ್ರಧಾನವಾಗಿಟ್ಟುಕೊಂಡು, ಶೌರ್ಯದಲ್ಲಿ ಸಿಂಹ, ಸತ್ಯ–ಶಾಂತಿಯಲ್ಲಿ ಹಂಸದಂತೆ ಎಂಬುದು ಇದರ ಸಂಕೇತ.



ಸಪ್ತಮಾತೃಕೆಯರು, ಗಣೇಶ, ಮಹಿಷಮರ್ಧಿನಿ, ಶಾರದೆ, ಉಮಾಮಹೇಶ್ವರ ಹೊಯ್ಸಳ ಶೈಲಿಯ ಸುಂದರ ಶಿಲ್ಪಗಳಲ್ಲಿ ಪ್ರಮುಖವಾದವು. ಸಪ್ತಮಾತೃಕೆಯರ ಶಿಲ್ಪದಲ್ಲಿ ಕೊನೆಯ ಎರಡೂ ಬದಿಯಲ್ಲಿ ಶಾರದೆ ಹಾಗೂ ಗಣೇಶ ವಿಗ್ರಹವಿದ್ದು, ಮಧ್ಯ ಭಾಗದಲ್ಲಿ ನವದುರ್ಗೆಯರನ್ನು ಕಾಣಬಹುದು. ದೇವಾಲಯದ ಛಾವಣಿಯನ್ನು ಕಟ್ಟುವಾಗ ಭಾರವಾದ ಕಲ್ಲನ್ನು ಮೇಲೇರಿಸಬೇಕಾದ್ದರಿಂದ ಅದಕ್ಕೆ ಆಧಾರವಾಗಿ ಮರದ ಬಂಬುಗಳನ್ನು ನೆಲದ ಮೇಲೆ ಊರಲು, ನೆಲದಲ್ಲಿ ಅಲ್ಲಲ್ಲಿ ಕೊರೆಗಳನ್ನು ಮಾಡಲಾಗಿದೆ. ದೇಗುಲದ ದ್ವಾರದ ಕಲ್ಲಿನ ನೆಲದ ಕೆಲವು ಕಡೆ ಅಳುಗುಳಿ ಮನೆ, ಚೌಕಾಬಾರ, ಪಗಡೆ ಆಟದ ರೇಖೆಗಳನ್ನು ಕಲ್ಲಿನ ನೆಲಹಾಸಿನಲ್ಲೇ ಕೊರೆದಿರುವುದನ್ನು ಕಾಣಬಹುದು. ಅದು ಹಿಂದಿನಿಂದಲೂ ಇತ್ತೇ ಅಥವಾ ನಂತರ ಜನ ಸಮಯ ಕಳೆಯಲು ಆಟವಾಡುವುದಕ್ಕೋಸ್ಕರ ಅವುಗಳನ್ನು ಕೆತ್ತಿದ್ದಾರೆಯೇ ಎಂದು ಯಾರಿಗೂ ತಿಳಿಯದು.

ಮೊಘಲರ ದಾಳಿಗೆ ಸಿಕ್ಕ ಬಹಳಷ್ಟು ಶಿಲ್ಪಗಳು ಊನವಾಗಿವೆ. ಅಷ್ಟೇ ಅಲ್ಲದೆ, ಈ ಪಂಚಲಿಂಗೇಶ್ವರ ದೇವಾಲಯವು ಪುರಾತತ್ವ ಇಲಾಖೆಯವರ ಸುಪರ್ದಿಗೆ ಬರುವ ಮುನ್ನ ಎರಡು ಚಾಮುಂಡೇಶ್ವರಿ ವಿಗ್ರಹಗಳು ಸೇರಿದಂತೆ ಒಟ್ಟು ಐದು ವಿಗ್ರಹಗಳು ಕಳುವಾಗಿವೆ. ಇಲ್ಲಿ ಪ್ರತಿವರ್ಷ ಜಾತ್ರೆ ನಡೆಯುತ್ತಿದ್ದು, ವಿಶೇಷ ಹಬ್ಬಗಳಲ್ಲಿ, ಕಾರ್ತಿಕ ಮಾಸ ಹಾಗೂ ಶಿವರಾತ್ರಿಯಂದು ದೀಪಾಲಂಕೃತಗೊಂಡ ಈ ದೇವಾಲಯ ಸುತ್ತಮುತ್ತಲ ಹಳ್ಳಿ, ಊರುಗಳಿಂದ ನೂರಾರು ಭಕ್ತರನ್ನು ಬರಮಾಡಿಕೊಳ್ಳುತ್ತದೆ.

**ಪ್ರಚಾರವಿಲ್ಲದ ರಾಷ್ಟ್ರೀಯ ಸ್ಮಾರಕ:** ಪ್ರಾಚೀನ ಸ್ಮಾರಕ, ಪುರಾತತ್ವ ಸ್ಥಳ ಹಾಗೂ ಅವಶೇಷಗಳ ಅಧಿನಿಯಮ 1958ರ ಪ್ರಕಾರ, ಇದನ್ನು ರಾಷ್ಟ್ರೀಯ ಮಹತ್ವದ ಸ್ಮಾರಕವನ್ನಾಗಿ ಘೋಷಿಸಲಾಗಿದೆ. ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆಯ ವತಿಯಿಂದ ಇಲ್ಲಿನ ದೇವಾಲಯದ ನಿರ್ವಹಣೆಗೆ ಒಬ್ಬ ಭದ್ರತಾ ಸಿಬ್ಬಂದಿ ನೇಮಿಸಿದ್ದಾರೆ. ದುರದೃಷ್ಟ ಎಂದರೆ, ಹೊಯ್ಸಳ ಕಾಲದ ಈ ಸುಂದರ ಶಿಲ್ಪಕಲಾಕೃತಿಯುಳ್ಳ ಪಂಚಲಿಂಗೇಶ್ವರ ದೇವಾಲಯಕ್ಕೆ ಅಷ್ಟಾಗಿ ಪ್ರಚಾರ ಸಿಕ್ಕಿಲ್ಲ. ಹೊಯ್ಸಳರ ಕಾಲದ ಈ ಅಮೂಲ್ಯ ನಿಧಿಯ ನಿರ್ವಹಣೆಯೆಡೆಗೆ ಸರ್ಕಾರ ಮನಸ್ಸು ಮಾಡಿಲ್ಲ.

ಪ್ರತಿಕ್ರಿಯಿಸಿ: feedback@sudha.co.in




ಕ್ಯಾನ್ಸರ್ ಇದೆಯೇ?

ಯಾವುದೇ ಹಂತದ ಕ್ಯಾನ್ಸರ್‌ಗೆ ಆಯುರ್ವೇದ/ನಾಟಿ ಔಷಧ ಕೊಡಲಾಗುವುದು.

ಕೇವಲ ₹2000/- ಮಾತ್ರ

ಕಪಿಲಾ ಆರೋಗ್ಯಧಾಮ

ಲಯನ್ ಸಫಾರಿ ಸಮೀಪ, ತ್ಯಾವರೆಕೊಪ್ಪ, ಶಿವಮೊಗ್ಗ–577204.

ಸಂಪರ್ಕಿಸಿ: 07619553245 08277196659

Post/ ಕೊರಿಯರ್ ಸೌಲಭ್ಯ ಇದೆ

ವಿ.ಸೂ.: ಚರ್ಮ ಹಾಗೂ ಕೂದಲಿನ ತೊಂದರೆ, ನರದ ತೊಂದರೆಗಳಿಗೂ ಔಷಧ ಕೊಡಲಾಗುವುದು.